ಅನೇಕ ಉಪಯೋಗಕರ ಸತ್ವವಿದೆ. ಈ ಗಿಡದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ, ಇದು ಅನೇಕ ರೋಗಗಳಿಗೆ ರಾಮಬಾಣವಾಗಿದೆ. ಇದು ಚರ್ಮವನ್ನು ಪೋಷಿಸಿ, ಹೊಳಪುಗೊಳಿಸುತ್ತದೆ.'

'ಅವಳು ಬಹುವಾಗಿ ಪ್ರೀತಿಸುತ್ತಿದ್ದ ಮರದ ಹೆಸರು 'ಕಸ್ತೂರಾ' ಎಂದಾಗಿತ್ತು. ಅವಳು ಜಪಾನಿನ ಮೂಲ ನಿವಾಸಿಯಾಗಿದ್ದಳು...' ಎಂದ ಪಾಲ್.

'ಮನುಷ್ಯರು ಮಾತ್ರವಲ್ಲ, ಮರ–ಗಿಡಗಳು ಸಹ ಸ್ಪಂದಿಸುತ್ತವೆ' ಎಂದ ಪಾಲ್.

'ಕಸ್ತೂರಾ ಮತ್ತು ಅವಳ ನಡುವೆ ಒಂದು ವಿಚಿತ್ರ ಸಂಬಂಧವಿತ್ತು. ಅವಳ ಪ್ರಿಯತಮ ಅದೇ ಮರಕ್ಕೆ ನೇತು ಹಾಕಿಕೊಂಡಿದ್ದ...'

ಪಾಲ್ ಮೈಮರೆತು ಹೇಳಿದ. ನಾನು ಭಯಗೊಂಡೆ. ಮಸಾಜು ಮಾಡುತ್ತಿದ್ದ ನನ್ನ ಕೈಗಳು ನಿಂತವು. ನನ್ನ ಗ್ರಾಹಕನಾದ ಈ ತೀರ್ಥಯಾತ್ರಿಕ ತುಂಬಾ ರಹಸ್ಯಮಯ ವ್ಯಕ್ತಿಯಾಗಿದ್ದಾನೆಂದು ಅನ್ನಿಸಿತು. ನಾನು ಕ್ಯಾಬಿನ್‌ನಿಂದ ಹೊರಗೆ ಹೋಗಲು ಅನುವಾದೆ; ಆದರೆ ಅಗಲೇ ನನ್ನನ್ನು ಸಂಭಾಳಿಸಿಕೊಂಡು, ನನ್ನ ಪಾರ್ಲರ್‌ಗೆ ಅನೇಕ ಗ್ರಾಹಕರು ಬರುತ್ತಾರೆ, ಹೀಗೆ ನಾನು ವಿಚಲಿತಳಾಗಬಾರದು ಎಂದು ನಿರ್ಧರಿಸಿದೆ.

ನಾನು ನಿಟ್ಟುಸಿರು ಬಿಡುತ್ತಾ ಪಾಲ್‌ನನ್ನು ಕೇಳಿದೆ, 'ಆತ್ಮಹತ್ಯೆ ಮಾಡಿಕೊಂಡನೇ?'

'ಮರಗಳನ್ನು ಆತ್ಮಹತ್ಯೆ ಮತ್ತು ಕೊಲೆ ಮಾಡಲು ಸಹ ಉಪಯೋಗಿಸಲಾಗುತ್ತದೆ...'

'ಓಹ್... ಏಕೆ?'

'ಅವನು ಡಾನ್ ಎನರ್ಜಿಯ ಡೈರೆಕ್ಟರ್ ಆಗಿದ್ದ... ಮಾನಸಿಕ ಒತ್ತಡದಿಂದಾಗಿ ಅವನು ಆತ್ಮಹತ್ಯೆಯನ್ನು ಮಾಡಿಕೊಂಡ. ಜೀವನದಲ್ಲಿ ಪದವಿ, ಹಣ, ಪ್ರತಿಷ್ಠೆಯೇ ಸರ್ವವೂ ಅಲ್ಲ. 'ಡಾನ್ ಡೈರೆಕ್ಟರ್ ತನ್ನ ಗರ್ಲ್‌ಫ್ರೆಂಡಿನ ಲಾನ್‌ನಲ್ಲಿದ್ದ ಮರಕ್ಕೆ ನೇಣು ಹಾಕಿಕೊಂಡು ತನ್ನ ಜೀವನವನ್ನು ಕೊನೆಗೊಳಿಸಿಕೊಂಡಿದ್ದಾನೆ' ಎಂಬ ಸುದ್ದಿ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ನೀವು ಪತ್ರಿಕೆಗಳನ್ನು ಓದುವುದಿಲ್ಲವೇ?'

'ಇಂಥ ಸುದ್ದಿಗಳನ್ನು ಓದದಿದ್ದರೇನೇ ಒಳಿತು' ನಾನು ಕೂಡಲೇ ಪ್ರತಿಕ್ರಿಯಿಸಿದೆ.

'ನಿಮ್ಮ ಗಾಯಗಳು ವಾಸಿಯಾದವೋ, ಇಲ್ಲವೋ?' ಪಾಲ್ ತನ್ನ ಕಥೆಯನ್ನು ಮುಂದುವರೆಸಲು ಪ್ರೇರೇಪಿಸಿದ. ನನ್ನ ಆ ಗಾಯ ಎರಡು ಮೂರು ದಿನಗಳಲ್ಲಿಯೇ ವಾಸಿಯಾಗಿತ್ತು. ಆದರೆ ಕೆಲವು ಗಾಯಗಳು ಇನ್ನೂ ವಾಸಿಯಾಗಿಲ್ಲ. ಬಾಲ್ಯದಲ್ಲಿ ಅಮ್ಮ ಅಲೋವೆರಾದಿಂದ ಮಾಡಿದ ಚಿಕಿತ್ಸೆಯಿಂದಾಗಿ, ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಅಪಾರ ಶ್ರದ್ಧೆ ಯುಂಟಾಗಿತ್ತು. ನಾನು ಹೋದಲ್ಲೆಲ್ಲಾ, ನನ್ನ ಮನೆಯಲ್ಲಿ ಅಲೋವೆರಾ ಗಿಡಗಳನ್ನು ಅಗತ್ಯವಾಗಿ ನೆಡುತ್ತೇನೆ. ಅಲೋವೆರಾ ನನ್ನ ತಾಯಿಯನ್ನು ನೆನಪಿಸುತ್ತದೆ.

(ಸಶೇಷ)

# ಪ್ರತಿಕ್ರಿಯೆ




### ಪಲಾಯನ ಸರಿಯೆ?

ಹತ್ತು ಕಂತುಗಳಲ್ಲಿ ಮೂಡಿ ಬಂದ ಧಾರಾವಾಹಿ ಕುತೂಹಲದಿಂದ ಪ್ರಾರಂಭವಾಗಿ ನೀರಸವಾಗಿ ಮುಗಿಯಿತೆನಿಸಿತು. ಕಥಾನಾಯಕ ಸಂಜಯ್ ಸುಂದರವಾಗಿ ನೆಮ್ಮದಿಯಿಂದ ಇದ್ದ ಸೀತಾಪುರವನ್ನು ಆಧುನಿಕ ಜಗತ್ತಿಗೆ ಪರಿಚಯಿಸಿ ಅವರ ನೆಮ್ಮದಿಯನ್ನು ಹಾಳು ಮಾಡಿದನೇನೋ ಎನಿಸಿತು. ಮೊಬೈಲ್ ಸಂಪರ್ಕ ಕೊಡಿಸಿದ್ದು ಸರಿ ಎನಿಸಿದರೂ ಕಾಟೇಜ್‌ಗಳನ್ನು ನಿರ್ಮಿಸಿ ಹೊರಜಗತ್ತಿನ ಜನರನ್ನು ಅಲ್ಲಿ ಕರೆಸಿದರೆ ಅವರು ಮಾಡುವ ಅನಾಹುತಗಳು ಅಮೆರಿಕದಲ್ಲಿ ಇದ್ದವನಿಗೆ ತಿಳಿದಿರಲಿಲ್ಲವೇ. ಒಮ್ಮೆ ಅಂತಹ ಸುಂದರ ಪರಿಸರಕ್ಕೆ ನಮ್ಮ ಜನ ಹೋದರೆ ಅವರು ಬಳಸಿ ಬಿಸಾಡುವ ಪ್ಲಾಸ್ಟಿಕ್ ತ್ಯಾಜ್ಯ, ಕುಡಿದು ಬಿಸಾಡುವ ಬಾಟಲಿಗಳಿಂದ ಆ ಪರಿಸರ ನಾಶವಾಗುವುದಿಲ್ಲವೇ. ಶಾಸ್ತ್ರಿಗಳಿಗೆ ಕೊರೊನಾ ಬಂದಿತೆಂದು ಊರ ಜನರಿಗೆ ಹೆದರಿ ಅಮೆರಿಕಗೆ ಪಲಾಯನ ಮಾಡಿದ್ದು ಎಷ್ಟು ಸರಿ? ಸಂಜಯ್ ಇನ್ನು ಮುಂದೆ ಸೀತಾಪುರದಲ್ಲೇ ಇರಬಹುದೆಂದು ತಿಳಿದಿದ್ದ ನಮಗೆ ನಿರಾಶೆಯಾಯಿತು.

–ಎಸ್‌.ವಿ. ಗೋಪಾಲ್ ರಾವ್, ಬೆಂಗಳೂರು

### ಕಾದು ಓದಿದ ಧಾರಾವಾಹಿ

ಧಾರಾವಾಹಿ ಚೆನ್ನಾಗಿ ಮೂಡಿ ಬಂದಿದೆ. ಕುತೂಹಲದಿಂದ ಕೂಡಿತ್ತು. ಗುರುವಾರ ಯಾವಾಗ ಬರುತ್ತೋ ಎಂದು ಕಾದು ಕುಳಿತುಕೊಳ್ಳುವಂತೆ ಮಾಡುತಿತ್ತು. ಬೇಗ ಮುಗಿಸಿದ್ದಕ್ಕೆ ಬೇಸರವಾಯಿತು. ಸಂಜಯನ ನಿರ್ಗಮನ ಆಗಬಾರದಿತ್ತು.

–ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಕುತೂಹಲಕಾರಿ

ಕುತೂಹಲಕರ ಧಾರಾವಾಹಿ. ಹೊಸ ತಲೆಮಾರಿನ ಕಥೆಯ ವಿಷಯ, ನಿರೂಪಣೆ ಚೆನ್ನಾಗಿತ್ತು. ಆದರೆ ಈ ವಾರ ದಿಢೀರ್ ಮುಗಿದು ಹೋಯಿತು ಯಾಕೆ?

–ಕೆ. ಗಣೇಶ ರಾಜ

### ಜನರೊಳಗೊಂದಾಗಿ...

ಧಾರಾವಾಹಿ ಮುಗಿದೇ ಹೋಯಿತಲ್ಲ ಅನ್ನಿಸಿತು. ಸೋಶಿಯಲ್ ಮೀಡಿಯಾ ಬಗ್ಗೆ ಗೊತ್ತಿಲ್ಲದೆ ಇರುವವರಿಗೂ ಅದರ ಬಗ್ಗೆ ಕುತೂಹಲ ಉಂಟಾಗುವಂತೆ ಮಾಡಿದ್ದಾರೆ. ಸೀತಾಪುರದ ಜನಗಳ ಮಧ್ಯೆ ನಾವು ಒಬ್ಬರಾಗಿದ್ದೆವು ಅನ್ನಿಸಿತು.

–ವಿಜಯ ರಾವ್, ಎಚ್‌.ಎಸ್‌. ಶ್ರೀಮತಿ, ಬೆಂಗಳೂರು, ಕೆ.ಎನ್‌. ಪ್ರಭಾಕರ ಗುಪ್ತ, ಹಾಸನ ಎ.ಕೆ. ಅನಂತಮೂರ್ತಿ, ಬೆಂಗಳೂರು

### ರುಚಿಕರ ಓದು

ಪರಿವರ್ತನೆ ಜಗದ ನಿಯಮ ಎನ್ನುತ್ತಾರೆ. ಅದರಂತೆ ದಟ್ಟ ಕಾಡಿನ ನಡುವೆ ಇದ್ದ ಪುಟ್ಟ ಊರು ಸೀತಾಪುರವನ್ನು ವಿಶ್ವಕ್ಕೆ ಪರಿಚಯಿಸಲು ಹೊರಟ ಕಥಾನಾಯಕನ ಪ್ರಯತ್ನ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಯಿತು 'ವೈರಸ್'. ಒಳ್ಳೆಯ ಕಾದಂಬರಿಯನ್ನು ಓದಿದ ಅನುಭವ ನೀಡಿತು. ಛೆ.. ಇಷ್ಟು ಬೇಗ ಮುಗಿಯಿತಾ!

–ಟಿ.ಎಸ್‌. ಪ್ರತಿಭಾ, ಚಿತ್ರದುರ್ಗ

### ಮೌಲ್ಯಯುತ ಕಾದಂಬರಿ

ಧಾರಾವಾಹಿ ಆಸಕ್ತಿದಾಯಕವಾಗಿತ್ತು. ಅತ್ಯಂತ ಮೌಲ್ಯಯುತ ಕಾದಂಬರಿ. ಆಧುನಿಕ ಜಗತ್ತಿನ ತಲ್ಲಣಗಳು, ಅತಿಯಾದ ತಂತ್ರಜ್ಞಾನದಿಂದ ಉಂಟಾಗುವ ಅಪಸವ್ಯಗಳು, ಹಳ್ಳಿಯವರ ಮುಗ್ಧ ಜೀವನದ ಮೇಲೆ ಆಧುನಿಕತೆಯಿಂದಾಗುವ ದುಷ್ಪರಿಣಾಮಗಳನ್ನು ಸೂಕ್ಷ್ಮವಾಗಿ ತಿಳಿಸಿತು.

–ಬಿಲ್ಲೇಶ್ವರ ಅಚ್ಚು, ಹುಂಚ

### ಎಷ್ಟರಮಟ್ಟಿಗೆ ಸರಿ?

ಸೀತಾಪುರ ಎಂಬ ಕುಗ್ರಾಮವನ್ನು ಸಂಜಯ ಎಂಬ ಯುವಕ ಎಲ್ಲಾ ಅಡೆತಡೆಗಳನ್ನು ಮೆಟ್ಟಿ ನಿಂತು ಆಧುನಿಕ ಸೌಲಭ್ಯದತ್ತ ತರುವುದರಲ್ಲಿ ಯಶಸ್ವಿಯಾಗುತ್ತಾನೆ. ಆದರೆ ಧಾರಾವಾಹಿಯ ಅಂತ್ಯವನ್ನು ಶಾಸ್ತ್ರಿಗಳ ಅನಾರೋಗ್ಯ ನೆಪದಲ್ಲಿ ನಾಯಕ ಭ್ರಮನಿರಸನ ಹೊಂದಿ ಊರು ತೊರೆಯುವಂತೆ ಮಾಡುವುದು ಎಷ್ಟರಮಟ್ಟಿಗೆ ಸರಿ?

–ಭಾರತೀ ಗಂಗಾಧರ್, ಬೆಂಗಳೂರು

### ಸಿನಿಮಾ ನೋಡಿದಂತೆನಿಸಿತು

ಧಾರಾವಾಹಿಯು ಕಲಾವಿದ ಎಚ್‌.ಎಸ್‌. ಮೋನಪ್ಪನವರ ಸುಂದರ ಚಿತ್ರಗಳ ಜತೆ ಪ್ರಸಕ್ತ ವಿದ್ಯಮಾನಗಳ ಚಲನಚಿತ್ರ ನೋಡಿದ ಹಾಗೆ ಅನ್ನಿಸಿತು. ಸಂಜಯನಿಗೆ ಅವನ ಪೂರ್ವಿಕರ 'ಸೀತಾಪುರದ' ಆಕರ್ಷಣೆ, ಶಾಸ್ತ್ರಿಗಳಿಗೆ ಕೊರೊನಾ ವೈರಸ್ ಆಕ್ರಮಣ, ಸಂಜಯನ ಪರದಾಟ, ಊರಿನ ಜನರ ಆಕ್ರೋಶ... ಚೆನ್ನಾಗಿ ಮೂಡಿ ಬಂದಿದೆ. ಆಶಾ, ಮಾದ, ಬಾಬಣ್ಣ... ಎಲ್ಲ ಪಾತ್ರಗಳು ಚೆನ್ನಾಗಿವೆ., ಹರ್ಷಿಸ್‌ಗೆ ಹಳ್ಳಿಮದ್ದೇ ಶ್ರೇಷ್ಠ ಎಂಬುದು ನಿಜ.

–ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು, ಪಿ ಹೆಚ್ ಪಾಟೀಲ್, ರಾಣೆಬೆನ್ನೂರ